ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ಕೆಎಸ್‌ಎಂಸಿ&ಎ ಹೌಸ್, 42, ಮಿಲ್ಲರ್ಸ್ ರಸ್ತೆ , ಬೆಂಗಳೂರು – 560001


ದೂರವಾಣಿ ಸಂಖ್ಯೆ: 22256287/822254289/22256288

ಇ–ಮೇಲ್: mcalimited@gmail.com

ದಿನಾಂಕ: 01.07.2023

ಸಾರ್ವಜನಿಕರ ಮಾಹಿತಿಗಾಗಿ ಮಾಹಿತಿ ಹಕ್ಕು ಕಾಯಿದೆ 2005, ಸೆಕ್ಷನ್ 4(1) (ಬಿ)ರ ಪ್ರಕಾರ ಕೆಳಕಂಡ ಸಂಸ್ಥೆಯ ಪರಿಷ್ಕೃತ ವಿವರಗಳನ್ನು ಪ್ರಕಟಿಸಲಾಗಿದೆ.

**I)** **ಸಂಸ್ಥೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ**



ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಯು ಕಂಪನಿ ಕಾಯ್ದೆ 1956ರ ಅನ್ವಯ ನೋಂದಾಯಿತ ವಾಣಿಜ್ಯ ಸಂಸ್ಥೆಯಾಗಿದ್ದು, ಎಂಎಸ್ಐಎಲ್‌ನ ಅಂಗಸಂಸ್ಥೆಯಾಗಿರುತ್ತದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಯಾವುದೇ ಅನುದಾವನ್ನು ಪಡೆಯದೆ ಖಾಸಗಿಯವರ ಸ್ಪರ್ಧೆಯೊಂದಿಗೆ ತನ್ನ ಸ್ವಂತ ವಹಿವಾಟಿನಿಂದ ನಡೆಯುತ್ತಿರುವ ಜಾಹೀರಾತು ಸಂಸ್ಥೆಯಾಗಿರುತ್ತದೆ. ಸಂಸ್ಥೆಯು ತನ್ನದೇ ಆದ ನಿರ್ದೇಶಕರ ಮಂಡಳಿಯನ್ನು ಹೊಂದಿರುತ್ತದೆ. ಈ ನಿರ್ದೇಶಕರು ಹಿಡುವಳಿ (ಹೋಲ್ಡಿಂಗ್) ಸಂಸ್ಥೆಯಾದ ಎಂಎಸ್ಐಎಲ್ ಮತ್ತು ಮೂಲ ಹಿಡುವಳಿ (ಅಲ್ಟಿಮೇಟ್ ಹೋಲ್ಡಿಂಗ್) ಸಂಸ್ಥೆಯಾದ ಕೆಎಸ್ಐಐಡಿಸಿಯ ಅಧಿಕಾರಿಗಳಾಗಿರುತ್ತಾರೆ ಹಾಗೂ ಸರ್ಕಾರವು ಅಧಿಕಾರೇತರ ಸದಸ್ಯರನ್ನು ಮಂಡಳಿಗೆ ನಿರ್ದೇಶಕರನ್ನಾಗಿ ನೇಮಿಸುತ್ತದೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳಿಗೆ, ಸಾರ್ವಜನಿಕ ಉದ್ದಿಮೆಗಳಿಗೆ ಮತ್ತು ಸರ್ಕಾರದ ನಿಗಮ/ಮಂಡಳಿಗಳಿಗೆ ಜಾಹೀರಾತು ಮತ್ತು ಪೂರಕ ಸೇವೆಗಳನ್ನು ಒದಗಿಸುವುದು ಸಂಸ್ಥೆಯ ಮುಖ್ಯ ಕಾರ್ಯವಾಗಿದೆ. ಸಂಸ್ಥೆಯು ಮೈಸೂರು, ಮಂಗಳೂರು, ಹುಬ್ಬಳ್ಳಿ, ಕಲಬುರಗಿ, ವಿಜಯಪುರ, ತುಮಕೂರು, ಶಿವಮೊಗ್ಗ, ಬಳ್ಳಾರಿ, ಬೆಳಗಾವಿ, ಹಾಸನ, ದಾವಣಗೆರೆ, ಕೋಲಾರ, ಮಂಡ್ಯ, ಗದಗ, ಬೀದರ್ ಮತ್ತು ಮುಂಬೈ, ರಾಯಚೂರು/ಯಾದಗಿರಿ ಹಾಗೂ ಮುಂಬೈ ಮತ್ತು ದೆಹಲಿಯಲ್ಲಿ ಸಂಪರ್ಕ ಶಾಖೆಗಳನ್ನು ಹೊಂದಿರುತ್ತದೆ.

**ಕೆಎಸ್ಎಂಸಿಎ ಸೇವೆಗಳು**

- ಪತ್ರಿಕೆ/ಮ್ಯಾಗಜಿನ್ ಜಾಹೀರಾತುಗಳು
- ಡೈರೆಕ್ಟ್ ಮೇಲರ್ಸ್
- ಪೋಸ್ಟರ್‌ಗಳು, ಸ್ಟ್ರೀಮರ್‌ಗಳು, ಡ್ಯಾಂಗ್ಲರ್‌ಗಳು, ಲೀಫ್‌ಲೆಟ್‌ಗಳಂತಹ ಪಿಓಪಿ ಮೆಟೀರಿಯಲ್‌ಗಳು
- ಫೋಲ್ಡರ್‌ಗಳು, ಬ್ರೋಚರ್‌ಗಳು ಮತ್ತು ಬುಕ್‌ಲೆಟ್‌ಗಳಂತಹ ಮುದ್ರಣ ಸಾಹಿತ್ಯ
- ಟಿ.ವಿ. ಜಾಹೀರಾತುಗಳು/ರೇಡಿಯೋ ಜಿಂಗಲ್‌ಗಳು
- ಹೋರ್ಡಿಂಗ್‌ಗಳು
- ಎಕ್ಸಿಬಿಷನ್‌ಗಳು
- ಈವೆಂಟ್ ಮ್ಯಾನೇಜ್‌ಮೆಂಟ್
- ಪತ್ರಿಕಾ ಗೋಷ್ಠಿಗಳು
- ಒಳಾಂಗಣ ಅಲಂಕಾರ

**ಮಾನ್ಯತೆ**

- ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ
- ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್
- ದೂರದರ್ಶನ/ಆಲ್ ಇಂಡಿಯಾ ರೇಡಿಯೋ

## II) ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳು

ಸಂಸ್ಥೆಯು ಕ್ರಿಯೇಟಿವ್ , ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ, ಗ್ರಾಹಕ ಸೇವೆ, ಉತ್ಪಾದನೆ, ವಸೂಲಾತಿ, ಕಂಪನಿ ಕಾರ್ಯದರ್ಶಿ, ಹಣಕಾಸು ಮತ್ತು ಲೆಕ್ಕಪತ್ರ ಹಾಗೂ ಆಡಳಿತ ವಿಭಾಗಗಳನ್ನು ಒಳಗೊಂಡಿದೆ.

ಪ್ರತೀ ವಿಭಾಗವೂ ಹಿರಿಯ ಅಧಿಕಾರಿಯನ್ನು ಹೊಂದಿರುವುದರ ಜೊತೆಗೆ ಜಾಹೀರಾತಿಗೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳ ಉಸ್ತುವಾರಿಯನ್ನು ಪ್ರಧಾನ ವ್ಯವಸ್ಥಾಪಕರು ವಹಿಸಿಕೊಂಡಿರುತ್ತಾರೆ. ಆಯಾ ವಿಭಾಗದ ಮುಖ್ಯಸ್ಥರು ತಮ್ಮ ವಿಭಾಗದ ಕೆಲಸಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಪ್ರತೀ ಅಧಿಕಾರಿಗಳಿಗೂ ಕರ್ತವ್ಯವನ್ನು ಹಾಗೂ ಜವಾಬ್ದಾರಿಯನ್ನು ಗೊತ್ತುಪಡಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು ಸಂಸ್ಥೆಯ ಆಡಳಿತದ ಮುಖ್ಯಸ್ಥರಾಗಿದ್ದು, ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುವ ಮತ್ತು ಇತರೆ ವಿಷಯಗಳಲ್ಲಿ ಸಂಪೂರ್ಣ ಅಧಿಕಾರ ಹೊಂದಿರುತ್ತಾರೆ, ಸಂಸ್ಥೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಕಾರ್ಯ ನೀತಿಗಳನ್ನು ರೂಪಿಸುವ ಸಂಪೂರ್ಣ ಅಧಿಕಾರ ನಿರ್ದೇಶಕರ ಮಂಡಳಿಯದ್ದಾಗಿರುತ್ತದೆ.

## III) ಸಂಸ್ಥೆಯಲ್ಲಿ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾಣ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:

ನಿರ್ದೇಶಕರ ಮಂಡಳಿಯು ಸಭೆಗಳ ಮುಖಾಂತರ ಅಥವಾ ಅಗತ್ಯವಿದ್ದಲ್ಲಿ, ಸರ್ಕ್ಯುಲರ್ ರೆಸಲ್ಯೂಶನ್ ಮೂಲಕ ಸಂಸ್ಥೆಯನ್ನು ಮುನ್ನಡೆಸಲು ನಿರ್ದೇಶನಗಳನ್ನು ನೀಡುವ ಹಾಗೂ ನೀತಿಗಳ್ನು ರೂಪಿಸುವ ಅತ್ಯುನ್ನತ ಪ್ರಾಧಿಕಾರವಾಗಿರುತ್ತದೆ. ಸಂಸ್ಥೆಯ ನಿರ್ವಹಣೆ ಮತ್ತು ಕಾರ್ಯಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು ಗಣನೀಯವಾದ ಅಧಿಕಾರವನ್ನು ಹೊಂದಿದ್ದಾರೆ.

ವ್ಯವಸ್ಥಾಪಕ ನಿರ್ದೇಶಕರ ನಿರ್ದೇಶನ ಹಾಗೂ ನಿಯಂತ್ರಣದಡಿಯಲ್ಲಿ ಎಲ್ಲಾ ವಿಭಾಗದ ಮುಖ್ಯಸ್ಥರು ಕಾರ್ಯ ನಿರ್ವಹಿಸುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು ಎಲ್ಲಾ ಪ್ರಮುಖ ನಿರ್ಧಾರಗಳನ್ನು ಸಂಬಂಧಪಟ್ಟ ಆಯಾ ವಿಭಾಗದ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ, ತೆಗೆದುಕೊಳ್ಳುತ್ತಾರೆ.

## IV) ಸಂಸ್ಥೆಯ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:

ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು ಸಂಸ್ಥೆಯು ನಿರ್ದೇಶಿಸಿರುವ ವಿಧಾನದಂತೆಯೇ ಕಾರ್ಯ ನಿರ್ವಹಿಸುತ್ತಾರೆ. ಎಲ್ಲಾ ಕಾರ್ಯಗಳು ಸೂಚಿತ ಸಮಯಕ್ಕೆ ತಕ್ಕಂತೆ ಪೂರ್ಣಗೊಳ್ಳಬೇಕು ಮತ್ತು ಸೂಚಿತ ಸಮಯವನ್ನು ಎಲ್ಲಾ ಅಧಿಕಾರಿಗಳು ಪಾಲಿಸಬೇಕು.

## V) ಸಂಸ್ಥೆಯ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:

ಸಂಸ್ಥೆಯು ತನ್ನದೇ ಆದ ಸಂಸ್ಥಾಪನ ಪತ್ರ ಹಾಗೂ ಕಟ್ಟಲೆಗಳು, ಆಡಳಿತಾತ್ಮಕ ಕೈಪಿಡಿ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಒಳಗೊಂಡಿದೆ ಮತ್ತು ಸರ್ಕಾರದ ಕಂಪನಿಗೆ/ ಜಾಹೀರಾತು ಸಂಸ್ಥೆಗೆ ಅನ್ವಯಿಸುವ ಎಲ್ಲಾ ಕಾಯಿದೆ ಮತ್ತು ನಿಯಮಗಳನ್ನು ದಿನ ನಿತ್ಯದ ಕಾರ್ಯಗಳ ನಿರ್ವಹಣೆಯಲ್ಲಿ ಪಾಲಿಸಲಾಗುವುದು.

## VI) ಸಂಸ್ಥೆಯು ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ, ಪ್ರವರ್ಗಗಳ ವಿವರಪಟ್ಟಿ:

1. ಕಂಪನಿ ಸಂಸ್ಥಾಪನಾ ಪತ್ರ ಮತ್ತು ಸಂಸ್ಥೆಯ ಕಟ್ಟಲೆಗಳು.
   (Memorandum of Association and Articles of Association)

2) ವೃಂದ ಮತ್ತು ನೇಮಕಾತಿ ನಿಯಮಗಳು
3) ನೌಕರರ ವೈಯಕ್ತಿಕ ಕಡತಗಳು
4) ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದ ಕಡತಗಳು
5) ಸೇವಾ ನಿಯಮಗಳು

## VII) ಸಂಸ್ಥೆಯ ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು:

ಸಂಸ್ಥೆಯು ವಾಣಿಜ್ಯ ಸಂಸ್ಥೆಯಾಗಿದೆ ಮತ್ತು ಸ್ಪರ್ಧಾತ್ಮಕ ಪರಿಸರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನದಲ್ಲಿ ಸಾರ್ವಜನಿಕರ ಪ್ರಾತಿನಿಧ್ಯ ಹೊಂದಿರುವುದಿಲ್ಲ. ಅಧಿಕಾರಿಗಳು ಮತ್ತು ಕೆಲವೊಮ್ಮೆ ಸರ್ಕಾರವು ನೇಮಿಸಿರುವ ಅಧಿಕಾರೇತರ ಸದಸ್ಯರುಗಳನ್ನು ಒಳಗೊಂಡ ಮಂಡಳಿಯು ಕಾರ್ಯನೀತಿಯ ವಿಷಯಗಳಿಗೆ ಅನುಮೋದನೆ ನೀಡುತ್ತದೆ.

## VIII) ಸಮಸ್ಥೆಯಲ್ಲಿನ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಪಟ್ಟಿಕೆ:

ಮಂಡಳಿಯನ್ನು ಕೆಳಕಂಡಂತೆ ಸಂಯೋಜಿಸಲಾಗಿದೆ:

1) ಶ್ರೀ ಎಂ.ಎಸ್. ಪಾಟೀಲ್, ಮಾನ್ಯ ಬೃಹತ್ ಮಧ್ಯಮ & ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಮತ್ತು ಅಧ್ಯಕ್ಷರು–ಕೆಎಸ್ಎಂಸಿಎ
2) ಶ್ರೀ ಸಿದ್ದಲಿಂಗಪ್ಪ ಬಿ ಪೂಜಾರಿ , ವ್ಯವಸ್ಥಾಪಕ ನಿರ್ದೇಶಕರು – ಕೆಎಸ್ಎಂಸಿಎ
3) ಶ್ರೀ ಮನೋಜ್ ಕುಮಾರ್, ಐಎಫ್ಎಸ್, ವ್ಯವಸ್ಥಾಪಕ ನಿರ್ದೇಶಕರು, ಎಂಎಸ್ಐಎಲ್ ಹಾಗೂ ನಿರ್ದೇಶಕರು – ಕೆಎಸ್ಎಂಸಿಎ
4) ಶ್ರೀ ಡಿ.ಪಿ. ಪ್ರಕಾಶ್, ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್ಐಐಡಿಸಿ ಹಾಗೂ ನಿರ್ದೇಶಕರು–ಕೆಎಸ್ಎಂಸಿಎ
5) ಶ್ರೀ ರಮೇಶ್. ಆರ್, ನಿರ್ದೇಶಕರು (ತಾಂತ್ರಿಕ ಕೋಶ) – ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ನಿರ್ದೇಶಕರು–ಕೆಎಸ್ಎಂಸಿಎ
6) ಶ್ರೀ ಅರುಲ್ ಕುಮಾರ್, ಕೆಎಎಸ್, ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಕಾಸ ಸೌಧ & ನಿರ್ದೇಶಕರು – ಕೆಎಸ್ಎಂಸಿಎ
7) ಶ್ರೀ ಎ. ಎಂ. ಚಂದ್ರಪ್ಪ, ನಿರ್ದೇಶಕರು–ಎಂಎಸ್ಐಎಲ್ ಹಾಗೂ ನಿರ್ದೇಶಕರು– ಕೆಎಸ್ಎಂಸಿಎ
8) ಶ್ರೀಮತಿ ಬಿ.ಎನ್, ಶ್ರೀದೇವಿ, ಕಂಪನಿ ಕಾರ್ಯದರ್ಶಿ, ಎಂ ಎಸ್ ಐ ಎಲ್ ಹಾಗೂ ನಿರ್ದೇಶಕರು – ಕೆಎಸ್ಎಂಸಿಎ
9) ಶ್ರೀ ರಮಾಕಾಂತ್ ಹೆಬ್ಬಳ್ಳಿ, ಮುಖ್ಯ ಪ್ರಧಾನ ವ್ಯವಸ್ಥಾಪಕರು, ಎಂಎಸ್ಐಎಲ್ ಹಾಗೂ ನಿರ್ದೇಶಕರು– ಕೆಎಸ್ಎಂಸಿಎ

**ಸಮಿತಿಗಳು**

1) ಲೈಂಗಿಕ ಕಿರುಕುಳ ಆಂತರಿಕ ಸಮಿತಿ
2) ಕಂಪನಿಯ ಸಾಮಾಜಿಕ ಜವಾಬ್ದಾರಿ ಸಮಿತಿ
3) ಆಹಾರ ಸಮಿತಿ
4) ಉಪದಾನ ಮತ್ತು ನಿವೃತ್ತಿ ನಿಧಿಯ ಸಮಿತಿ
5) ಖರೀದಿ ಸಮಿತಿ
6) ಸಾಂಸ್ಕೃತಿಕ ಸಮಿತಿ

ಸಂಸ್ಥೆಯ ನಿರ್ದೇಶಕರ ಮಂಡಳಿಯು ಕಂಪನಿ ಕಾಯಿದೆ, 2013ರ ಅಡಿಯಲ್ಲಿ ಅವಶ್ಯಕತೆಗೆ ತಕ್ಕಂತೆ ಸಭೆಗಳನ್ನು ಜರುಗಿಸುತ್ತದೆ. ಸಂಸ್ಥೆಯ ನಿರ್ದೇಶಕರ ಮಂಡಳಿಯು ಜರುಗಿಸುವ ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರುವುದಿಲ್ಲ ಮತ್ತು ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುವುದಿಲ್ಲ.

## IX) ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ:

| ಕ್ರ.ಸಂ. | ಹೆಸರು | ಪದನಾಮ | ದೂ.ಸಂಖ್ಯೆ | ವಿಸ್ತರಣೆ |
|---|---|---|---|---|
| 1. | ಶ್ರೀ ಸಿದ್ದಲಿಂಗಪ್ಪ ಬಿ ಪೂಜಾರಿ | ವ್ಯವಸ್ಥಾಪಕ ನಿರ್ದೇಶಕರು | 22266271 | 218 |
| 2. | ಶ್ರೀ ಪಿ.ಎಸ್.ಸಂದೀಶ | ವ್ಯವಸ್ಥಾಪಕರು – ಉಪ ಪ್ರಧಾನ ವ್ಯವಸ್ಥಾಪಕರು ತಾಂತ್ರಿಕೇತರ | 22256287 | 213 |
| 3. | ಶ್ರೀ ನಾಗಪ್ಪ ಹೆಚ್ ಕಿತ್ತೂರು | ವ್ಯವಸ್ಥಾಪಕರು – ಗ್ರಾ. ಸೇ. ವಿ | 22256288 | 214 |
| 4. | ಶ್ರೀಮತಿ ರಶ್ಮಿ ಯಾದಾಟಿ | ವ್ಯವಸ್ಥಾಪಕರು – ಹಣಕಾಸು & ಲೆಕ್ಕ ಶಾಖೆ | 22285857 | 238 |
| 5. | ಶ್ರೀಮತಿ ಲತಾ ನಾಯಕ್ | ಉಪ ನಿರ್ದೇಶಕರು –ಆಡಳಿತ (ನಿಯೋಜನೆ ಮೇಲೆ) | 222256287 | 229 |
| 6. | ಶ್ರೀಮತಿ ಗೀತಾ.ಹೆಚ್.ಕೆ | ಶಾಖಾ ವ್ಯವಸ್ಥಾಪಕರು– ಕೋಲಾರ | 22256287 | 207 |
| 7. | ಶ್ರೀಮತಿ ಪುನಿತಾ.ಕೆ.ಸಿ | ಅಕೌಂಟ್ ಎಕ್ಸಿಕ್ಯೂಟಿವ್ – ಗ್ರಾ. ಸೇ. & ಸಹಾಯಕ ವ್ಯವಸ್ಥಾಪಕರು – ಮಾಧ್ಯಮ (ಪ್ರಭಾರ) | 22254289 | 204 |
| 8. | ಶ್ರೀಮತಿ ಜಿ.ವೇದಾವತಿ | ಅಕೌಂಟ್ ಎಕ್ಸಿಕ್ಯೂಟಿವ್ – ಗ್ರಾ. ಸೇ & ಸಹಾಯಕ ವ್ಯವಸ್ಥಾಪಕರು–ಲೆಕ್ಕ ಶಾಖೆ (ಪ್ರಭಾರ) | 22256287 | 205 |
| 9. | ಶ್ರೀ ಅನಿಲ್ ಕುಮಾರ್.ಆರ್ | ಸಹಾಯಕ ವ್ಯವಸ್ಥಾಪಕರು– ಇ & ಇಮಾ. & ಸಹಾಯಕ ವ್ಯವಸ್ಥಾಪಕರು ರಾಯಚೂರು/ಯಾದಗಿರಿ (ಪ್ರಭಾರ) | 22256287 | 224 |
| 10. | ಶ್ರೀಮತಿ ಆರ್.ಟಿ.ರಾಜೇಶ್ವರಿ | ಶಾಖಾ ವ್ಯವಸ್ಥಾಪಕರು– ಮೈಸೂರು | 0821–2343109 | – |
| 11. | ಶ್ರೀ ರಾಜೇಶ್.ಬಿ.ಕೋರಿಶೆಟ್ಟಿ | ಶಾಖಾ ವ್ಯವಸ್ಥಾಪಕರು – ಬೆಳಗಾವಿ & ಬೀದರ್ (ಪ್ರಭಾರ) | 08312473066 | –– |
| 12. | ಶ್ರೀ ಮಾರುತಿ.ಆರ್ | ಶಾಖಾ ವ್ಯವಸ್ಥಾಪಕರು – ದಾವಣಗೆರೆ & ಬಳ್ಳಾರಿ (ಪ್ರಭಾರ) | 08192233456 | –– |
| 13. | ಶ್ರೀ ಕಾಂತರಾಜು.ಕೆ.ಎಂ | ಶಾಖಾ ವ್ಯವಸ್ಥಾಪಕರು – ತುಮಕೂರು & ಕಲಬುರಗಿ & ವಿಜಯಪುರ (ಪ್ರಭಾರ) | 08172241251 | –– |
| 14. | ಶ್ರೀ ಸಿದ್ದೇಶ.ಆರ್ | ಶಾಖಾ ವ್ಯವಸ್ಥಾಪಕರು – ಶಿವಮೊಗ್ಗ & ಹಾಸನ (ಪ್ರಭಾರ) | 08182227755 | –– |
| 15. | ಶ್ರೀ ರಾಘವೇಂದ್ರ ಶಾಸ್ತ್ರಿ | ಶಾಖಾ ವ್ಯವಸ್ಥಾಪಕರು – ಮಂಗಳೂರು | 08242497808 | –– |
| 16. | ಶ್ರೀ ಸುರೇಶ್ ರಾಥೋಡ್ | ಶಾಖಾ ವ್ಯವಸ್ಥಾಪಕರು – ಬೀದರ್ (ಅಮಾನತ್ತಿನಲ್ಲಿ) | 08472230178 | –– |
| 17. | ಶ್ರೀ ಎಂ.ಎಸ್.ಪಾಟೀಲ್ | ಶಾಖಾ ವ್ಯವಸ್ಥಾಪಕರು – ವಿಜಯಪುರ (ಅಮಾನತ್ತಿನಲ್ಲಿ) | 08352277377 | –– |
| 18. | ಶ್ರೀ ಸಿದ್ದಲಿಂಗೇಶ ಹಸಬಿ | ಶಾಖಾ ವ್ಯವಸ್ಥಾಪಕರು – ಹುಬ್ಬಳ್ಳಿ & ಗದಗ (ಪ್ರಭಾರ) | 08362271117 | –– |
| 19. | ಶ್ರೀಮತಿ ಆರ್. ತೇಜಾವತಿ | ಸಹಾಯಕ ವ್ಯವಸ್ಥಾಪಕರು– ಮಾಧ್ಯಮ | 22256287 | 209 |
| 20. | ಶ್ರೀ ಬಿ. ಕೆ. ಚಂದ್ರಶೇಖರ್ | ಕಾನೂನು ಸಹಾಯಕರು – ಆಡಳಿತ | 22256287 | 215 |
| 21. | ಶ್ರೀ ಬಿ. ಎ. ಮಠ್ | ಮೇಲ್ವಿಚಾರಕರು – ಮಾಧ್ಯಮ | 22256287 | 209 |
| 22. | ಶ್ರೀ ಜಿ. ಪ್ರಭು | ಹಿರಿಯ ಸಹಾಯಕರು – ಗ್ರಾ. ಸೇ. | 22256287 | 204 |
| 23. | ಶ್ರೀಮತಿ ಬಿ. ವಿ. ರತ್ನಮ್ಮ | ಹಿರಿಯ ಸಹಾಯಕರು – ಆಡಳಿತ | 22256287 | 234 |
| 24. | ಶ್ರೀ ಬಿ. ಪ್ರಭು | ಸಹಾಯಕರು | 22256287 | 234 |
| 25. | ಶ್ರೀ. ಜೆ.ರವಿ ಕುಮಾರ್ | ಚಾಲಕರು | 22256287 | 234 |
| 26. | ಶ್ರೀ ಎನ್. ಜಯಕುಮಾರ್ | ಅಟೆಂಡರ್ | 22256287 | 218 |

**ಸಂಕ್ಷಿಪ್ತ ರೂಪ:** ಗ್ರಾ. ಸೇ. – ಗ್ರಾಹಕ ಸೇವೆ

## X) ಸಂಸ್ಥೆಯ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಸಂಬಳ:

| ಕ್ರ.ಸಂ. | ಹೆಸರು | ಪದನಾಮ/ವಿಭಾಗ | ತಿಂಗಳ ಒಟ್ಟು ವೇತನ (ದಿ:30.06.2023 ರಲ್ಲಿ ಇದ್ದಂತೆ) |
|---|---|---|---|
| 1. | ಶ್ರೀ ಸಿದ್ದಲಿಂಗಪ್ಪ ಬಿ ಪೂಜಾರಿ | ವ್ಯವಸ್ಥಾಪಕ ನಿರ್ದೇಶಕರು | 137699 |
| 2. | ಶ್ರೀ ಪಿ.ಎಸ್.ನಂದೀಶ | ವ್ಯವಸ್ಥಾಪಕರು – ಉಪ ಪ್ರಧಾನ ವ್ಯವಸ್ಥಾಪಕರು ತಾಂತ್ರಿಕೇತರ | 184152 |
| 3. | ಶ್ರೀ ನಾಗಪ್ಪ ಹೆಚ್ ಕಿತ್ತೂರು | ವ್ಯವಸ್ಥಾಪಕರು – ಗ್ರಾ. ಸೇ. ವಿ | 173752 |
| 4. | ಶ್ರೀಮತಿ ರಶ್ಮಿ ಯಾದಾಟಿ | ವ್ಯವಸ್ಥಾಪಕರು – ಹಣಕಾಸು & ಲೆಕ್ಕ ಶಾಖೆ | 145188 |
| 5. | ಶ್ರೀಮತಿ ಲತಾ ನಾಯಕ್ | ಉಪ ನಿರ್ದೇಶಕರು –ಆಡಳಿತ (ನಿಯೋಜನೆ ಮೇಲೆ) | 113552 |
| 6. | ಶ್ರೀಮತಿ ಗೀತಾ.ಹೆಚ್.ಕೆ | ಶಾಖಾ ವ್ಯವಸ್ಥಾಪಕರು– ಕೋಲಾರ | 77480 |
| 7. | ಶ್ರೀಮತಿ ಪುನಿತಾ.ಕೆ.ಸಿ | ಅಕೌಂಟ್ ಎಕ್ಸಿಕ್ಯೂಟಿವ್ – ಗ್ರಾ. ಸೇ. & ಸಹಾಯಕ ವ್ಯವಸ್ಥಾಪಕರು – ಮಾಧ್ಯಮ (ಪ್ರಭಾರ) | 108121 |
| 8. | ಶ್ರೀಮತಿ ಜಿ.ವೇದಾವತಿ | ಅಕೌಂಟ್ ಎಕ್ಸಿಕ್ಯೂಟಿವ್ – ಗ್ರಾ. ಸೇ & ಸಹಾಯಕ ವ್ಯವಸ್ಥಾಪಕರು–ಲೆಕ್ಕ ಶಾಖೆ (ಪ್ರಭಾರ) | 108121 |
| 9. | ಶ್ರೀ ಅನಿಲ್ ಕುಮಾರ್.ಆರ್ | ಸಹಾಯಕ ವ್ಯವಸ್ಥಾಪಕರು– ಇ & ಇಮಾ. & ಸಹಾಯಕ ವ್ಯವಸ್ಥಾಪಕರು ರಾಯಚೂರು/ಯಾದಗಿರಿ (ಪ್ರಭಾರ) | 85071 |
| 10. | ಶ್ರೀಮತಿ ಆರ್.ಟಿ.ರಾಜೇಶ್ವರಿ | ಶಾಖಾ ವ್ಯವಸ್ಥಾಪಕರು– ಮೈಸೂರು | 103261 |
| 11. | ಶ್ರೀ ರಾಜೇಶ್.ಬಿ.ಕೋರಿಶೆಟ್ಟಿ | ಶಾಖಾ ವ್ಯವಸ್ಥಾಪಕರು – ಬೆಳಗಾವಿ & ಬೀದರ್ (ಪ್ರಭಾರ) | 103311 |
| 12. | ಶ್ರೀ ಮಾರುತಿ.ಆರ್ | ಶಾಖಾ ವ್ಯವಸ್ಥಾಪಕರು – ದಾವಣಗೆರೆ & ಬಳ್ಳಾರಿ (ಪ್ರಭಾರ) | 102861 |
| 13. | ಶ್ರೀ ಕಾಂತರಾಜು.ಕೆ.ಎಂ | ಶಾಖಾ ವ್ಯವಸ್ಥಾಪಕರು – ತುಮಕೂರು & ಕಲಬುರಗಿ & ವಿಜಯಪುರ (ಪ್ರಭಾರ) | 98201 |
| 14. | ಶ್ರೀ ಸಿದ್ದೇಶ.ಆರ್ | ಶಾಖಾ ವ್ಯವಸ್ಥಾಪಕರು – ಶಿವಮೊಗ್ಗ & ಹಾಸನ (ಪ್ರಭಾರ) | 103311 |
| 15. | ಶ್ರೀ ರಾಘವೇಂದ್ರ ಶಾಸ್ತ್ರಿ | ಶಾಖಾ ವ್ಯವಸ್ಥಾಪಕರು – ಮಂಗಳೂರು | 81554 |
| 16. | ಶ್ರೀ ಸುರೇಶ್ ರಾಥೋಡ್ | ಶಾಖಾ ವ್ಯವಸ್ಥಾಪಕರು – ಬೀದರ್ (ಅಮಾನತ್ತಿನಲ್ಲಿ) | 36920 |
| 17. | ಶ್ರೀ ಎಂ.ಎಸ್.ಪಾಟೀಲ್ | ಶಾಖಾ ವ್ಯವಸ್ಥಾಪಕರು – ವಿಜಯಪುರ (ಅಮಾನತ್ತಿನಲ್ಲಿ) | 36920 |
| 18. | ಶ್ರೀ ಸಿದ್ದಲಿಂಗೇಶ ಹಸಬಿ | ಶಾಖಾ ವ್ಯವಸ್ಥಾಪಕರು – ಹುಬ್ಬಳ್ಳಿ & ಗದಗ (ಪ್ರಭಾರ) | 103311 |
| 19. | ಶ್ರೀಮತಿ ಆರ್. ತೇಜಾವತಿ | ಸಹಾಯಕ ವ್ಯವಸ್ಥಾಪಕರು– ಮಾಧ್ಯಮ | 93865 |
| 20. | ಶ್ರೀ ಬಿ. ಕೆ. ಚಂದ್ರಶೇಖರ್ | ಕಾನೂನು ಸಹಾಯಕರು – ಆಡಳಿತ | 87365 |
| 21. | ಶ್ರೀ ಬಿ. ಎ. ಮಠ್ | ಮೇಲ್ವಿಚಾರಕರು – ಮಾಧ್ಯಮ | 72027 |
| 22. | ಶ್ರೀ ಜಿ. ಪ್ರಭು | ಹಿರಿಯ ಸಹಾಯಕರು – ಗ್ರಾ. ಸೇ. | 62373 |
| 23. | ಶ್ರೀಮತಿ ಬಿ. ವಿ. ರತ್ನಮ್ಮ | ಹಿರಿಯ ಸಹಾಯಕರು – ಆಡಳಿತ | 59373 |
| 24. | ಶ್ರೀ ಬಿ. ಪ್ರಭು | ಸಹಾಯಕರು | 52005 |
| 25. | ಶ್ರೀ. ಜೆ.ರವಿ ಕುಮಾರ್ | ಚಾಲಕರು | 44940 |
| 26. | ಶ್ರೀ ಎನ್. ಜಯಕುಮಾರ್ | ಅಟೆಂಡರ್ | 38693 |

**XI) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ; ಸಂಸ್ಥೆಯ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:**

ಸಂಸ್ಥೆಯು ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆಯುವುದಿಲ್ಲ.

**XII) ಸಂಸ್ಥೆಯು ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ:**

ಸಂಸ್ಥೆಗೆ ಇದು ಅನ್ವಯಿಸುವುದಿಲ್ಲ.

**XIII) ಸಂಸ್ಥೆಯು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಪತ್ರಗಳನ್ನು ಪಡೆಯುವವರ ವಿವರ:**

ಸಂಸ್ಥೆಗೆ ಇದು ಅನ್ವಯಿಸುವುದಿಲ್ಲ.

**XIV) ಸಂಸ್ಥೆಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ:**

ಸಂಸ್ಥೆಯ ಹಣಕಾಸು ಮತ್ತು ಲೆಕ್ಕ, ಕ್ರಿಯೇಟಿವ್ ಮತ್ತು ಮಾಧ್ಯಮ ವಿಭಾಗದ ವಿವರಗಳು ಗಣಕೀಕೃತವಾಗಿರುತ್ತವೆ.

**XV) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕರ್ತವ್ಯ ವೇಳಾ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ:**

ಸಂಸ್ಥೆಯ ಕೆಲಸ, ಕಾರ್ಯ ಹಾಗೂ ನೀತಿಗಳ ಬಗ್ಗೆ ತಿಳಿಯಲು ಆಸಕ್ತಿಯುಳ್ಳ ಸಾರ್ವಜನಿಕರು, ಕಛೇರಿಯ ಕೆಲಸದ ವೇಳೆ ಬೆಳಿಗ್ಗೆ 10.00 ರಿಂದ 5.30 ಗಂಟೆಯ ಅವಧಿಯಲ್ಲಿ ಸಂಸ್ಥೆ ಗೊತ್ತುಪಡಿಸಿದ ಮಾಹಿತಿ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆಯಬಹುದು. ಸಂಸ್ಥೆಯು ತಿಂಗಳ ಪ್ರತೀ ಎರಡನೇ ಮತ್ತು ನಾಲ್ಕನೇ ಶನಿವಾರ ಹಾಗೂ ಇತರೆ ಸರ್ಕಾರಿ ರಜಾ ದಿನಗಳಂದು ತೆರೆದಿರುವುದಿಲ್ಲ. ಸಂಸ್ಥೆಯು ಸಾರ್ವಜನಿಕರ ಬಳಕೆಗೆ ಯಾವುದೇ ಗ್ರಂಥಾಲಯ ಅಥವಾ ಓದುವ ಕೋಣೆಯನ್ನು ಹೊಂದಿರುವುದಿಲ್ಲ.

**XVI) ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳು:**

ಮಾಹಿತಿ ಹಕ್ಕು ಅಧಿನಿಯದ ಕಲಂ 5(1) ಮತ್ತು (2)ರ ಅಡಿಯಲ್ಲಿ ಅಗತ್ಯವಾದ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರದ ಹೆಸರು ಹಾಗೂ ಹುದ್ದೆ ಮತ್ತು ಇತರೆ ವಿವರಗಳ ಬಗ್ಗೆ ಅಧಿಸೂಚನೆ ದಿನಾಂಕ 01.07.2023 ರಲ್ಲಿ ಪ್ರಕಟಿಸಲಾಗಿದೆ.

**ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್**

**(ಸಿದ್ದಲಿಂಗಪ್ಪ ಬಿ ಪೂಜಾರಿ)**
**ವ್ಯವಸ್ಥಾಪಕ ನಿರ್ದೇಶಕರು**